ಲಲಿತ ಮಂಟಪ

# ಜನಪದ-ಶಾಸ್ತ್ರೀಯ ಭೇದವೇಕೆ?

## ಕಟ್ಟೈಕೂತ್ತು ಕಲಾವಿದ ಪಿ. ರಾಜಗೋಪಾಲ್ ಸಂದರ್ಶನ

### ಕೋಡಿಬೆಟ್ಟು ರಾಜಲಕ್ಷ್ಮಿ

ತಮಿಳುನಾಡಿನ ಉತ್ತರ ಭಾಗದಲ್ಲಿ ಪ್ರಚಲಿತವಾಗಿರುವ ಕಲೆ ಕಟ್ಟೈಕೂತ್ತು. ಈ ಕಲಾಪ್ರಕಾರದಲ್ಲಿ ತೊಡಗಿಸಿಕೊಂಡಿರುವ ಹಿರಿಯ ಕಲಾವಿದರಾದ ಪೆರುಂಗತ್ತೂರು ರಾಜಗೋಪಾಲ್ ಹುಟ್ಟಿದ್ದು 1953ರಲ್ಲಿ. ಕಾಂಚೀಪುರಂನಲ್ಲಿ ಕಟ್ಟೈಕೂತ್ತು ಪ್ರದರ್ಶನದ ತಂಡವನ್ನು ನಡೆಸುತ್ತಿದ್ದ ಅವರ ತಂದೆ ಪೊನ್ನುಸ್ವಾಮಿ ವಾದ್ಯಾರ್ ಅವರ ಅಕಾಲಿಕ ಮರಣದ ನಂತರ ರಾಜಗೋಪಾಲ್ ತಂಡದ ಉಸ್ತುವಾರಿ ವಹಿಸಿಕೊಂಡರು. ಹಿಂದುಳಿದ ಸಮುದಾಯದ ಕಲಾವಿದರು ಹೆಚ್ಚಾಗಿರುವ, ಸಕ್ರಿಯವಾಗಿ ತೊಡಗಿಸಿಕೊಂಡಿರುವ ಈ ಕಲಾಪ್ರಕಾರವನ್ನು ಕಲಿಸುವುದಕ್ಕೆಂದು ಅವರು 1990ರಲ್ಲಿ 'ಕಟ್ಟೈಕೂತ್ತು ಸಂಗಮ್' ಗುರುಕುಲವನ್ನು ಆರಂಭಿಸಿದರು. ಅವರ ಈ ಶ್ರಮಕ್ಕೆ ಜೊತೆಯಾಗಿರುವ ನೆದರ್‌ಲ್ಯಾಂಡ್‌ನ ಸಂಶೋಧಕಿ ಹೆನ್ನೆ ಡಿ. ಬ್ರೂಯಿನ್ ಅವರ ಬಾಳಸಂಗಾತಿಯೂ ಹೌದು. ಪುರುಷಪ್ರಧಾನವಾದ ಈ ಕಲಾಪ್ರಕಾರದಲ್ಲಿ ಮಹಿಳೆಯರೂ ಭಾಗವಹಿಸುವಂತೆ ಪ್ರೋತ್ಸಾಹಿಸಿದವರು ರಾಜಗೋಪಾಲ್; ತಮ್ಮ ಗುರುಕುಲದಲ್ಲಿ ವಿದ್ಯಾರ್ಥಿನಿಯರಿಗೂ ಕಲಿಯಲು ಅವಕಾಶ ನೀಡಿದವರು. ಕಲಾವಿದರಾಗಿಯಷ್ಟೇ ಅಲ್ಲ, ಕಥಾಪ್ರಸಂಗಗಳ ಲೇಖಕರಾಗಿ ಗುರುತಿಸಿಕೊಂಡವರು. ಹರಿಯಾಣದ ಅಶೋಕಾ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಜರ್ಮನ್, ಇಂಗ್ಲೆಂಡ್, ಬೆಲ್ಜಿಯಂ, ಸ್ವಿಟ್ಸರ್‌ಲ್ಯಾಂಡ್‌ಗೆ ತಮ್ಮ ತಂಡವನ್ನು ಕರೆದೊಯ್ದು ಕಲಾಪ್ರದರ್ಶನಗಳನ್ನು ನೀಡುವ ಮೂಲಕ ಈ ಕಲೆಯ ಅಗಾಧ ಸಾಧ್ಯತೆಯನ್ನು ಅನ್ವೇಷಿಸಿದ್ದಾರೆ. ಅವರ ಈ ಕಲಾಸೇವೆಗೆ 'ಕಲೈಮಾಮಣಿ', 'ದಕ್ಷಿಣ ಚಿತ್ರ ವಿರುಂತು' ಸೇರಿದಂತೆ ಅನೇಕ ಬಿರುದು ಪುರಸ್ಕಾರಗಳು ಸಂದಿವೆ. ಅವರು 'ಮಯೂರ'ದೊಡನೆ ನಡೆಸಿದ ಮಾತುಕತೆಯ ಆಯ್ದ ಭಾಗಗಳು ಇಲ್ಲಿವೆ.